**About Bapuji Institute of Engineering and Technology:** Bapuji Institute of Engineering and Technology was started in the year 1979 with the initiative and foresight of Bapuji Educational Association. The institute has been recognized by AICTE and accredited by NAAC with ‘A’ Grade, and also accredited by NBA and Institution of Engineers, Kolkata. The Institute has grown by leaps and bounds, and at present offers 09 UG and 04 PG programmes in Engineering, Technology and Management. The college has 13 recognized research centers. In addition to academic activities, the college undertakes consultancy works in Civil, Environmental, Mechanical, Electrical & Electronics and other fields of Engineering.

**Vision of the Institute**

To be a center of excellence recognized nationally and internationally, in distinctive areas of engineering education and research, based on a culture of innovation and invention.

**Mission of the Institute**

BIET contributes to the growth and development of its students by imparting a broad based engineering education and empowering them to be successful in their chosen field by inculcating in them positive approach, leadership qualities and ethical values.

**About VTU**

VTU is one of the largest premier technological universities in India with 23 years of tradition of excellence in engineering & technical education, research and innovations. It came into existence in the year 1998 to cater the needs of Indian industries for training technical manpower with practical experience and sound theoretical knowledge. University has successfully achieved the tremendous task of bringing various colleges affiliated earlier to different universities, different syllabi, different procedures and different traditions under one umbrella. The University has 201 affiliated colleges, 1 constituent college and 24 autonomous colleges with undergraduate courses in 35 disciplines, PG program in 94 disciplines and Ph.D & M.Sc.(Engg) with research programs in 592 departments with over 4 lakhs engineering students studying in various affiliated colleges. The university has 13 quality improvement program (QIP) centers in various affiliated colleges and 16 extension centers for offering PG programs.

The University is making steady progress in developing and providing best technical environment for education, implementation of NEP 2020 and will continue to serve the nation in the coming years. Equipped with the extremely rich resources of outstanding students and faculty, partnerships with business, industry. Government and alumni, VTU is designing a future of global preeminence leadership and service. Recently, VTU has implemented number of innovative initiatives to promote planned and sustainable development of technical education in the country. To meet the 21$^{st}$ century challenges, University has continued its efforts on all fronts particularly research and development activities to become globally competitive.

University is comprised of multi-disciplinary and multi-level institutions offering wide ranging programmes in engineering, technology and Management. The University is making steady progress in developing and providing best technical environment for education and will continue to serve the nation in coming years. VTU has ranked 57$^{th}$ and 82$^{nd}$ in the Engineering and University Categories in the recently released MHRD NIRF ranking 2021.

**About workshop**

Education is the penultimate instrument that can bring progressive changes in the society. To improvise the system, attempts have been made to make situational changes to ensure fitness of the system through effective contribution. The national education policy 2020 is going to bring major paradigm shift with a prima facie hope of revolutionizing the education. It is imperative to create comprehensive understanding and awareness about the NEP-20 amongst all segments of the society. It is mentioned in the policy that Education is fundamental for achieving full human potential, developing an equitable and just society, and promoting national development. Universal high-quality education is the best way forward for developing and maximizing our country's rich talents and resources for the good of the individual, the society, the country, and the world. India has highest population of young people in the world over the next decade, and the comprehensive attempt to provide high-quality educational opportunities to all citizens will ensure the progressive and prosperous future of our country.

**Venue: S S Mallikarjun Cultural Center, BIET campus, Davangere.**

## Registration Form

Two Days Workshop in blended mode

On

# Implementation of NEP 2020

10th & 11th December 2021

1. **Name :**
2. **Department:**
3. **College address:**
4. **Email Id:**
5. **Mobile No:**
6. **Signature & Date:**

**Scan here to Register**

**Online Registration form link:**
https://forms.gle/Viz1TngjAA5NsinD6

**Workshop Dates:** 10th & 11th Dec. 2021

**Objectives of the Workshop:**

- Understand, analyze and interpret NEP 2020
- Focus towards skill development provisions of NEP 2020.
- Bridge the gap between industry and academia.
- To discuss the role of learners, teachers and society in policy implementation
- To develop understanding among participants about the access, equity, quality and inclusion as the underlying principles of the policy

**Outcomes:**

- Would have acquainted themselves with NEP 2020 so as to initiate it in their respective institutions.
- Would encourage interaction of industry and academia.
- Skill development based on local industries will be given adequate focus in the curriculum.

**Resource Persons:**

- Dr. Karisiddappa-Hon'ble Vice Chancellor, VTU
- Dr. A S Deshpande, Registrar, VTU
- Dr. B E Rangaswamy, Registrar (Evaluation), VTU
- Dr. J Shivakumar, Principal, Jain College of Engg. Belagavi
- Dr R V Ranganath, Professor,B.M.S.C.E
- Dr. S Manjappa, Director, R&D, Sahyadri College of Engg. and Management, Mangaluru

**Participants:**

- Faculty of technical institutions.

**Coordinators:**

- Dr. G P Desai, Dean, Public Relations 9845388943
- Dr. G S Sunitha, Professor & Head Dept. of E&CE, 9480297822
- Dr. Vinutha H P, Dean, Incubation 9964262478

National Education Policy 2020

**Bapuji Educational Association ®**

**Bapuji Institute of Engineering and Technology, Davangere-577004**

**NAAC Accredited with 'A' Grade**

in association with

Visvesvaraya Technological University (VTU), Belagavi

organizes

Two Days Workshop in blended mode

on

# Implementation of NEP 2020

10th & 11th December 2021




**Chief Patrons**

- Dr.Shamanur Shivashankarappa Honorary Secretary, BEA & Chairman, BIET
- Sri S S Mallikarjun, Joint Secretary, BEA
- Dr. Karisiddapa, Vice Chancellor, VTU

**Patrons**

- Dr. A S Deshpande, Registrar, VTU
- Dr. B E Rangaswamy, Registrar (Evaluation), VTU
- Prof. Y. Vrushabhendrappa, Director, BIET
- Dr. H B Aravind, Principal, BIET

Vijsyakarnataka 10/12/2021

# ಬಿಐಇಟಿಯಲ್ಲಿ ಕಾರ್ಯಾಗಾರ

■ **ವಿಕ ಸುದ್ದಿಲೋಕ** ದಾವಣಗೆರೆ

ನಗರದ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿರುವ ಎಸ್.ಎಸ್.ಮಲ್ಲಿಕಾರ್ಜುನ ಸಾಂಸ್ಕೃತಿಕ ಸಭಾಂಗಣದಲ್ಲಿ ಡಿ.10ರ ಬೆಳಗ್ಗೆ 10 ಗಂಟೆಯಿಂದ 'ರಾಷ್ಟ್ರೀಯ ಶಿಕ್ಷಣ ನೀತಿ-2020' ಕುರಿತು ಎರಡು ದಿನಗಳ ಕಾರ್ಯಾಗಾರ ನಡೆಯಲಿದೆ.

ಈ ಕುರಿತು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಬಿಐಇಟಿ ಪ್ರಿನ್ಸಿಪಾಲ್ ಡಾ.ಎಚ್.ಬಿ.ಅರವಿಂದ ಅವರು, ಕಾಲ ಘಟಕ್ಕೆ ಅನುಗುಣವಾಗಿ ಶಿಕ್ಷಣ ಕ್ಷೇತ್ರ ಕೂಡ ಬದಲಾವಣೆಗಳಿಗೆ ಒಗ್ಗಿಕೊಳ್ಳಬೇಕು. ಈ ನಿಟ್ಟಿನಲ್ಲಿ, 1986ರಲ್ಲಿ ಜಾರಿಗೊಳಿಸಲಾಗಿದ್ದ ರಾಷ್ಟ್ರೀಯ ಶಿಕ್ಷಣ ನೀತಿಗೆ ಪರ್ಯಾಯವಾಗಿ, 'ರಾಷ್ಟ್ರೀಯ ಶಿಕ್ಷಣ ನೀತಿ 2020' ಅನ್ನು ಕೇಂದ್ರ ಸರಕಾರ ಜಾರಿಗೊಳಿಸುತ್ತಿದೆ. ಮುಂದಿನ ಶೈಕ್ಷಣಿಕ ವರ್ಷದಿಂದ ಹೊಸ ನೀತಿ ಜಾರಿಗೆ ಬರಲಿದೆ. ಈ ಹಿನ್ನೆಲೆಯಲ್ಲಿ ಹೊಸ ಶಿಕ್ಷಣ ನೀತಿ ಕುರಿತು ಇರುವ ಗೊಂದಲಗಳನ್ನು ಪರಿಹರಿಸುವ ಮತ್ತು ಅರಿವು ಮೂಡಿಸುವ ಉದ್ದೇಶದಿಂದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದರು.

ಕೌಶಲ್ಯ, ತರಬೇತಿ, ಉದ್ಯಮ ಮತ್ತು ಶಿಕ್ಷಣ ಕ್ಷೇತ್ರದ ನಡುವಿನ ಅಂತರವನ್ನು ಕಡಿಮೆ ಮಾಡುವುದು ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಹಾಗೂ ಬೋಧಕ ವರ್ಗದ ಪಾತ್ರ ಎಷ್ಟಿದೆ ಎಂಬುದರ ಕುರಿತು ಚರ್ಚಿಸುವುದು ಈ ಕಾರ್ಯಾಗಾರದ ಉದ್ದೇಶವಾಗಿದೆ. 400ಕ್ಕೂ ಹೆಚ್ಚು ಉಪನ್ಯಾಸಕರು ಭಾಗವಹಿಸುವ ಕಾರ್ಯಾಗಾರದಲ್ಲಿ ವಿಟಿಯು ಕುಲಪತಿ ಡಾ.ಕರಿಸಿದ್ದಪ್ಪ, ಕುಲಸಚಿವ ಡಾ.ಎ.ಎಸ್.ದೇಶಪಾಂಡೆ, ಬೆಂಗಳೂರು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಸಿದ್ದಪ್ಪ, ಬಿಐಇಟಿ ನಿರ್ದೇಶಕರಾದ ಪ್ರೊ.ವೈ.ವೃಷಭೇಂದ್ರಪ್ಪ ಮೊದಲಾದವರು ಭಾಗವಹಿಸುವರು ಎಂದು ಮಾಹಿತಿ ನೀಡಿದರು.

**ನ್ಯಾಕ್ 'ಎ' ಶ್ರೇಣಿ:** ಶಿಕ್ಷಣ ಸಂಸ್ಥೆಗಳ ಗುಣಮಟ್ಟವನ್ನು ನಿರ್ಧರಿಸುವ ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ (ನ್ಯಾಕ್), ಬಿಐಇಟಿ ಕಾಲೇಜಿಗೆ 'ಎ' ಶ್ರೇಣಿಯನ್ನು ನೀಡಿದೆ. ಇದರೊಂದಿಗೆ ಕಳೆದ ತಿಂಗಳು ಸಂಸ್ಥೆಗೆ ಭೇಟಿ ನೀಡಿದ ರಾಷ್ಟ್ರೀಯ ಮಾನ್ಯತಾ ಮಂಡಳಿ (ಎನ್‌ಬಿಎ) ಕೂಡ ಸಂಸ್ಥೆಯ ಶೈಕ್ಷಣಿಕ ಗುಣಮಟ್ಟದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದೆ ಎಂದು ಬಿಐಇಟಿ ನಿರ್ದೇಶಕರಾದ ಪ್ರೊ.ವೈ.ವೃಷಭೇಂದ್ರಪ್ಪ ತಿಳಿಸಿದರು. ಸಂಸ್ಥೆಯ ಕಲ್ಲೇಶಪ್ಪ, ಪ್ಲೇಸ್ಮೆಂಟ್ ವಿಭಾಗದ ಮುಖ್ಯಸ್ಥರಾದ ನಿರ್ಮಲಾ, ಸಾರ್ವಜನಿಕ ಸಂಪರ್ಕ ಡೀನ್ ಡಾ.ಜೆ.ಪಿ.ದೇಸಾಯಿ ಇತರರು ಇದ್ದರು.

Vijayavani 10-12-2021

# ಬಿಐಇಟಿಯಲ್ಲಿ ಇಂದಿನಿಂದ ಕಾರ್ಯಾಗಾರ

» ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಚರ್ಚೆ

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೆ ರಾಷ್ಟ್ರೀಯ ಶಿಕ್ಷಣ ನೀತಿ ಅಳವಡಿಸಬೇಕು ಎಂದು ಕೇಂದ್ರ ಸರ್ಕಾರ ನಿರ್ಧರಿಸಿದೆ. ಇದನ್ನು ಏಕಾಏಕಿ ಅನುಷ್ಠಾನ ಮಾಡುವುದರ ಬದಲು, ಸಮಗ್ರ ಚರ್ಚೆ ನಡೆಯಬೇಕಿದೆ ಎಂದು ಬಿಐಇಟಿ ಪ್ರಾಚಾರ್ಯ ಡಾ.ಬಿ.ಎಚ್ ಅರವಿಂದ ಹೇಳಿದರು.

'ರಾಷ್ಟ್ರೀಯ ಶಿಕ್ಷಣ ನೀತಿ 2020' ಕುರಿತಂತೆ ಬಿಐಇಟಿ ಕಾಲೇಜಿನ ಎಸ್ ಎಸ್ ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಡಿ.10, 11ರಂದು ಕಾರ್ಯಾಗಾರ ಆಯೋಜಿಸಲಾಗಿದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಸಹಯೋಗದೊಂದಿಗೆ ಕಾರ್ಯಕ್ರಮ ನಡೆಯುತ್ತಿದೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಾರ್ಯಾಗಾರದಲ್ಲಿ ರಾಜ್ಯದ ವಿವಿಧ ಇಂಜಿನಿಯರಿಂಗ್ ಕಾಲೇಜುಗಳ 400 ಮಂದಿ ಉಪನ್ಯಾಸಕರು ಭಾಗವಹಿಸಲಿದ್ದಾರೆ. ಹೊಸ ಶಿಕ್ಷಣ ನೀತಿಯ ಬಗ್ಗೆ ಸವಿಸ್ತಾರವಾದ ಚರ್ಚೆ, ಕೌಶಲ ತರಬೇತಿ, ಉದ್ಯಮ ಮತ್ತು ಶಿಕ್ಷಣ ಕ್ಷೇತ್ರದ ನಡುವಿನ ಅಂತರ ತಗ್ಗಿಸುವ ಕುರಿತ ಚರ್ಚೆ, ನೀತಿ ಅನುಷ್ಠಾನದಲ್ಲಿ ವಿದ್ಯಾರ್ಥಿಗಳು, ಶಿಕ್ಷಕ ಮತ್ತು ಸಮಾಜದ ಪಾತ್ರ ಮುಂತಾದ ವಿಷಯಗಳ ಕುರಿತು ಉಪನ್ಯಾಸ ಇರಲಿದೆ ಎಂದರು.

ಭಾರತದ ಗ್ರಾಮೀಣ ಮತ್ತು ನಗರ ಪ್ರದೇಶದ ವಿದ್ಯಾರ್ಥಿಗಳ ವೃತ್ತಿಪರ ತರಬೇತಿ ಮಟ್ಟ ಹೆಚ್ಚಿಸಲು ರಾಷ್ಟ್ರೀಯ ಶಿಕ್ಷಣ ನೀತಿ ಸಹಕಾರಿಯಾಗಿದೆ. ರಾಜ್ಯದಲ್ಲಿ 250 ಇಂಜಿನಿಯರ್ ಕಾಲೇಜುಗಳಿವೆ. ಇದರಲ್ಲಿ ವಿಟಿಯು ಸಂಸ್ಥೆಗಳೇ 219 ಪ್ರಾಬಲ್ಯ ಸಾಧಿಸಿವೆ. ಇಂತಹದ್ದರಲ್ಲಿ ಬಿಐಇಟಿ, ರಾಜ್ಯದಲ್ಲಿ 14, ರಾಷ್ಟ ಮಟ್ಟದಲ್ಲಿ 57ನೇ ರ್‍ಯಾಂಕ್ ಪಡೆದಿದೆ.

ದೇಶದಲ್ಲಿ ಸುಮಾರು 3800 ಇಂಜಿನಿಯರಿಂಗ್ ಕಾಲೇಜುಗಳಿವೆ. ಪ್ರತಿ ವರ್ಷ 10 ಲಕ್ಷ ಜನ ಇಂಜಿನಿಯರ್ ಪದವಿ ಪಡೆದು ಹೊರ ಬರುತ್ತಿದ್ದಾರೆ. 2020-21ರಲ್ಲಿ 403 ಕಂಪನಿಯಿಂದ ಆಫರ್ ಬಂದಿದ್ದು, ಎಲ್ಲಾ ವಿಭಾಗದಲ್ಲೂ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ದೊರೆತಿದೆ ಎಂದು ಪ್ಲೇಸ್‌ಮೆಂಟ್ ಡೀನ್ ಡಾ. ನಿರ್ಮಲಾ ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ನಿರ್ದೇಶಕ ವೃಷಭೇಂದ್ರಪ್ಪ, ಸಾರ್ವಜನಿಕ ಸಂಪರ್ಕ ಡೀನ್ ಡಾ.ಜಿ.ಪಿ. ದೇಸಾಯಿ, ಕೆಮಿಕಲ್ ಇಂಜಿನಿಯರ್ ವಿಭಾಗದ ಮುಖ್ಯಸ್ಥ ಕಲ್ಲೇಶಪ್ಪ ಇತರರಿದ್ದರು.

Prajavani 10-12-2021

# 'ನೂತನ ಶಿಕ್ಷಣ ನೀತಿ' ಕಾರ್ಯಾಗಾರ ಇಂದಿನಿಂದ

ದಾವಣಗೆರೆ: ಬಿಐಇಟಿ ಕಾಲೇಜಿನ ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಸಭಾಂಗಣದಲ್ಲಿ ಡಿ.10 ಹಾಗೂ 11ರಂದು ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಎರಡು ದಿನಗಳ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಡಿ.10ರ ಬೆಳಿಗ್ಗೆ 10ಕ್ಕೆ ಉದ್ಘಾಟನೆಗೊಳ್ಳಲಿರುವ ಕಾರ್ಯಾಗಾರದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ. ಕರಿಸಿದ್ದಪ್ಪ, ಕುಲಸಚಿವ ಡಾ.ಎ.ಎಸ್. ದೇಶಪಾಂಡೆ, ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಕೆ. ಸಿದ್ದಪ್ಪ, ಬಿಐಇಟಿ ಕಾಲೇಜು ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಅತಿಥಿಗಳಾಗಿರುವರು. ಪ್ರಿನ್ಸಿಪಾಲ್ ಡಾ.ಎಚ್.ಬಿ. ಅರವಿಂದ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಕಾಲೇಜಿನ ಸಾರ್ವಜನಿಕ ಸಂಪರ್ಕ ಡೀನ್ ಡಾ.ಜಿ.ಪಿ. ದೇಸಾಯಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆನ್‌ಲೈನ್ ಹಾಗೂ ಆಫ್‌ಲೈನ್ ಎರಡೂ ರೀತಿಯಲ್ಲಿ ಕಾರ್ಯಾಗಾರ ಆಯೋಜಿಸಲಾಗಿದೆ. ರಾಜ್ಯದ ವಿವಿಧ ತಾಂತ್ರಿಕ ಮಹಾವಿದ್ಯಾಲಯಗಳ 400 ಉಪನ್ಯಾಸಕರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

**ಬಿಐಇಟಿಗೆ ರಾಷ್ಟ್ರೀಯ ಮನ್ನಣೆ:** ಬಿಐಇಟಿ ಕಾಲೇಜಿಗೆ ನ್ಯಾಕ್ ಎ ಶ್ರೇಣಿಯನ್ನು ನೀಡಿ ಪುರಸ್ಕರಿಸಿದೆ. ಹಾಗೂ ಎನ್‌ಬಿಎ ತಜ್ಞರ ಸಮಿತಿ ಕಳೆದ ತಿಂಗಳು ಕಾಲೇಜಿಗೆ ಭೇಟಿ ನೀಡಿದೆ ಎಂದು ಹೇಳಿದರು.

ಹಲವು ಅಂಶ ಒಳಗೊಂಡ ಮಾನದಂಡಗಳ ಪ್ರಕಾರ ಭಾರತದ ಎಲ್ಲಾ ಖಾಸಗಿ ಮತ್ತು ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ಪ್ರತ್ಯೇಕ ರ‍್ಯಾಂಕ್ ನೀಡಲಾಗುತ್ತದೆ. 'ಎಜುಕೇಷನ್ ಪೋಸ್ಟ್' ಶೈಕ್ಷಣಿಕ ಮಾಸಿಕ ಸಂಚಿಕೆ ಪ್ರಕಟಿಸಿರುವ ರಾಂಕ್‌ನಲ್ಲಿ ಬಿಐಇಟಿ ಕಾಲೇಜಿಗೆ ಅಖಿಲ ಭಾರತದಲ್ಲಿ 57ನೇ ರ‍್ಯಾಂಕ್ ಹಾಗೂ ರಾಜ್ಯ ಮಟ್ಟದಲ್ಲಿ 14ನೇ ರ‍್ಯಾಂಕ್ ದೊರೆತಿದೆ ಎಂದರು.

ರಾಜ್ಯದ ಟಾಪ್ 10ರೊಳಗೆ ಒಂದಾಗಿರುವ ಬಿಐಇಟಿ ಕಾಲೇಜು ಉದ್ಯೋಗ ಕಲ್ಪಿಸುವಲ್ಲೂ ಮಹತ್ತರ ಪಾತ್ರ ವಹಿಸಿದೆ ಎಂದು ಡಾ.ಸಿ.ಆರ್. ನಿರ್ಮಲಾ ತಿಳಿಸಿದರು.

ಕಾಲೇಜಿನ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಪ್ರಿನ್ಸಿಪಾಲ್ ಎಚ್.ಬಿ. ಅರವಿಂದ್, ಕಲ್ಲೇಶಪ್ಪ ಇದ್ದರು.

Kannadaprabha 10-12-2021

# ಇಂದಿನಿಂದ ಬಿಐಇಟಿಯಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತ ಕಾರ್ಯಾಗಾರ

## ರಾಜ್ಯದ ವಿವಿಧ ಕಾಲೇಜುಗಳ ಬೋಧಕರು ಭಾಗಿ




ದಾವಣಗೆರೆಯಲ್ಲಿ ಬಿಐಇಟಿ ಕಾಲೇಜು ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ನೂತನರಾಷ್ಟ್ರೀಯಶಿಕ್ಷಣನೀತಿಕುರಿತಂತೆ ಡಿ.10ರಿಂದ ಎರಡು ದಿನಗಳ ಕಾಲ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾನಿಲಯದ ಸಹಯೋಗದಲ್ಲಿ ನಗರದ ಬಿಐಇಟಿಕಾಲೇಜಿನಲ್ಲಿವಿಶೇಷಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜು ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.10ರ ಬೆಳಗ್ಗೆ10ಕ್ಕೆ ಬಿಐಇಟಿ ಆವರಣದ ಎಸ್ಎಸ್ ಮಲ್ಲಿಕಾರ್ಜುನಸಾಂಸ್ಕೃತಿಕಕೇಂದ್ರದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ವಿಶೇಷ ಕಾರ್ಯಾಗಾರಕ್ಕೆ ವಿಟಿಯು ಕುಲಪತಿ ಡಾ.ಕರಿಸಿದ್ದಪ್ಪ ಚಾಲನೆನೀಡುವರು. ಕುಲಸಚಿವ ಡಾ.ಎ.ಎಸ್.ದೇಶಪಾಂಡೆ, ಬೆಂಗಳೂರು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಸಿದ್ದಪ್ಪ, ಕಾಲೇಜು ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ ಮುಖ್ಯ ಅತಿಥಿಯಾಗಿ ಭಾಗವಹಿಸುವರು ಎಂದರು.

ಡಿ.11ರ ಮಧ್ಯಾಹ್ನ 3ಕ್ಕೆ ಡಾ.ಎಚ್.ಬಿ.ಅರವಿಂದ ಅಧ್ಯಕ್ಷತೆಯಲ್ಲಿ ಸಮಾರೋಪದಲ್ಲಿ ವಿಟಿಯುನ ಕುಲಸಚಿವ ಡಾ.ಬಿ.ಇ.ರಂಗಸ್ವಾಮಿ, ಮಂಗಳೂರಿನ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ನಿರ್ದೇಶಕ ಡಾ.ಎಸ್.ಮಂಜಪ್ಪ, ಬಿಐಇಟಿ ಕಾಲೇಜು ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಎರಡು ದಿನಗಳ ಕಾರ್ಯಾಗಾರದಲ್ಲಿ ಎನ್ಇಪಿ ಬಗ್ಗೆ ಸವಿಸ್ತಾರವಾಗಿ ಚರ್ಚೆಯಾಗಲಿದೆ ಎಂದು ಹೇಳಿದರು.

ರಾಜ್ಯದ ವಿವಿಧ ತಾಂತ್ರಿಕ ಮಹಾವಿದ್ಯಾಲಯಗಳಸುಮಾರು400 ಮಂದಿ ಉಪನ್ಯಾಸಕರು ಕಾರ್ಯಾಗಾರದಲ್ಲಿ ಭಾಗವಹಿಸುವರು. ಕಾರ್ಯಾಗಾರವನ್ನು ಆನ್ ಲೈನ್ ಮತ್ತು ಆಫ್ ಲೈನ್ ಎರಡೂ ರೀತಿಯಲ್ಲಿ ಆಯೋಜಿಸಲಾಗಿದೆ ಎಂದು ಮಾಹಿತಿನೀಡಿದರು. ಕಾರ್ಯಾಗಾರದಲ್ಲಿ ಹೊಸ ಶಿಕ್ಷಣ ನೀತಿ 2020ನ್ನು ಅರ್ಥೈಸುವುದು, ವಿಶ್ಲೇಷಿಸುವುದು, ಕೌಶಲ್ಯ ತರಬೇತಿ, ಉದ್ಯಮ ಮತ್ತು ಶಿಕ್ಷಣ ಕ್ಷೇತ್ರದ ನಡುವಿನ ಅಂತರ ಕಡಿಮೆ ಮಾಡುವುದು, ನೀತಿನ ಅನುಷ್ಠಾನದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರ ಮತ್ತು ಸಮಾಜದ ಪಾತ್ರವನ್ನು ಚರ್ಚಿಸುವುದು ಕಾರ್ಯಾಗಾರದ ಉದ್ದೇಶವಾಗಿದೆ ಎಂದರು.

ಕಾಲೇಜು ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ, ಸಾರ್ವಜನಿಕಸಂಪರ್ಕ ಡೀನ್ ಡಾ.ಜಿ.ಪಿ.ದೇಸಾಯಿ, ಪ್ರಾಧ್ಯಾಪಕಿ ಸಿ.ಆರ್.ನಿರ್ಮಲ, ಕಲ್ಲೇಶಪ್ಪ ಇತರರು ಇದ್ದರು.

## ಬಿಐಇಟಿಗೆ ರಾಷ್ಟಮಟ್ಟದ 57ನೇ ರ‍್ಯಾಂಕ್

ದಾವಣಗೆರೆ ಬಿಐಇಟಿ ಕಾಲೇಜಿಗೆ ಅಖಿಲ ಭಾರತೀಯ 57ನೇ ರ‍್ಯಾಂಕ್ ಹಾಗೂ ರಾಜ್ಯಮಟ್ಟದಲ್ಲಿ 14ನೇ ರ‍್ಯಾಂಕ್ ಲಭಿಸಿದೆ. ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತ ಪರಿಷತ್ (ನ್ಯಾಕ್), ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್‌ನಿಂದ ರಾಷ್ಟ್ರೀಯ ಮಾನ್ಯತಾ ಮಂಡಳಿ (ಎನ್‌ಬಿಎ)ಗಳು ನಿರ್ದಿಷ್ಟವಾದ ಮಾನದಂಡಗಳನ್ನು ರೂಪಿಸಿದೆ. ಈ ಮಾನದಂಡಗಳ ಪ್ರಕಾರ ಸಂಸ್ಥೆಯ ವಿವಿಧ ಸ್ತರಗಳನ್ನು ಹಾಗೂ ಅಂಕಿ ಅಂಶಗಳನ್ನು ತಜ್ಞರ ಮೂಲಕ ಪರಿಶೀಲಿಸಿ, ಸಂಸ್ಥೆಯ ಗುಣಮಟ್ಟವನ್ನು ನಿರ್ಧರಿಸಲಾಗುತ್ತದೆ. ಬಿಐಇಟಿ ಕಾಲೇಜಿಗೆ ಎನ್‌ಎಸಿ ಎ ಶ್ರೇಣಿ ನೀಡಿ, ಪುರಸ್ಕರಿಸಿದೆ. ಎನ್‌ಬಿಎ ತಜ್ಞರ ಸಮಿತಿ ಕಳೆದ ತಿಂಗಳಷ್ಟೇ ಕಾಲೇಜಿಗೆ ಭೇಟಿ ನೀಡಿತ್ತು.

• **ಡಾ.ಎಚ್.ಬಿ.ಅರವಿಂದ್**, ಪ್ರಾಚಾರ್ಯರು, ಬಿಐಇಟಿ ಕಾಲೇಜು.

ಅಂತರ ಕಾಪಾಡಬೇಕು.

Samyuktha Karnaraka ...ಮಹಾಂತೇಶ್ ಬೀಳಗಿ, ಜಿಲ

10-12-2021

ಸುದ್ದಿ ಮಿಂಚು

# ಇಂದಿನಿಂದ ಬಿಐಇಟಿಯಲ್ಲಿ ಕಾರ್ಯಾಗಾರ

ದಾವಣಗೆರೆ: ಬಿಐಇಟಿಯಲ್ಲಿ ಡಿ.10, 11 ರಂದು ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಎರಡು ದಿನ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಸಾರ್ವಜನಿಕ ಸಂಪರ್ಕ ಡೀನ್ ಡಾ.ಜಿ.ಪಿ.ದೇಸಾಯಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜಿನ ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಸಭಾಂಗಣದಲ್ಲಿ ಕಾರ್ಯಕ್ರಮದ ಉದ್ಘಾಟನೆ ನಡೆಯಲಿದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಕುಲಪಿತ ಡಾ.ಕರಿಸಿದ್ದಪ್ಪ, ಕುಲಸಚಿವ ಡಾ.ಎ.ಎಸ್. ದೇಶಪಾಂಡೆ, ಬೆಂಗಳೂರು ವಿವಿ ವಿಶ್ರಾಂತ ಕುಲಪತಿ ಡಾ.ಕೆ. ಸಿದ್ದಪ್ಪ, ಬಿಐಇಟಿ ಕಾಲೇಜು ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ಆಗಮಿಸಲಿದ್ದಾರೆ. ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದರು.ಆನ್‌ಲೈನ್ ಹಾಗೂ ಆಫ್‌ಲೈನ್ ಎರಡೂ ರೀತಿಯಲ್ಲಿ ಕಾರ್ಯಾಗಾರ ಆಯೋಜಿಸಿದ್ದು, ರಾಜ್ಯದ ವಿವಿಧ ತಾಂತ್ರಿಕ ಮಹಾವಿದ್ಯಾಲಯಗಳ ಸುಮಾರು 400 ಜನ ಉಪನ್ಯಾಸಕರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.ಬಿಐಇಟಿ ಕಾಲೇಜಿಗೆ ನ್ಯಾಕ್ ಎ ಶ್ರೇಣಿ ನೀಡಿ ಪುರಸ್ಕರಿಸಿದೆ. ಹಾಗೂ ಎನ್‌ಬಿಎ ತಜ್ಞರ ಸಮಿತಿ ಕಳೆದ ತಿಂಗಳು ಕಾಲೇಜಿಗೆ ಭೇಟಿ ನೀಡಿದೆ. ಬೋಧನೆ, ಸಂಶೋಧನೆ, ಉದ್ಯಮಗಳ ಜೊತೆಗೆ ಸಂಸ್ಥೆಯ ಸಂಬಂಧ ಗುರಿಗಳು, ಅಂತಾರಾಷ್ಟ್ರೀಯ ಮೇಲ್ನೋಟ ಇತ್ಯಾದಿ ಅಂಶ ಒಳಗೊಂಡ ಮಾನದಂಡಗಳ ಪ್ರಕಾರ 'ಎಜುಕೇಷನ್ ಪೋಸ್ಟ್' ಶೈಕ್ಷಣಿಕ ಮಾಸಿಕ ಸಂಚಿಕೆ ಪ್ರಕಟಿಸಿರುವ ಬಿಐಇಟಿ ಕಾಲೇಜಿಗೆ ಅಖಿಲ ಭಾರತೀಯ 57ನೇ ರ‍್ಯಾಂಕ್, ರಾಜ್ಯ ಮಟ್ಟದಲ್ಲಿ 14ನೇ ರ‍್ಯಾಂಕ್ ದೊರೆತಿದೆ ಎಂದರು. ಕಾಲೇಜಿನ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ಮಾತನಾಡಿ, ಅಂತಿಮ ವರ್ಷದ ವಿದ್ಯಾರ್ಥಿಗಳು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರಬೇಕಿರುವುದು ಮುಖ್ಯವಾಗಿದೆ ಎಂದರು. ಗೋಷ್ಠಿಯಲ್ಲಿ ಪ್ರಾಂಶುಪಾಲ ಎಚ್.ಬಿ. ಅರವಿಂದ್, ಡಾ.ಸಿ.ಆರ್. ನಿರ್ಮಲಾ, ಕಲ್ಲೇಶಪ್ಪ ಇದ್ದರು.

Udayavani 10-12-2021

■ ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜನೆ ■ ರಾಜ್ಯದ ವಿವಿಧೆಡೆಗಳ 400ಕ್ಕೂ ಅಧಿಕ ಉಪನ್ಯಾಸಕರು ಭಾಗಿ

# ಇಂದಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ ಕಾರ್ಯಾಗಾರ

ದಾವಣಗೆರೆ: ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಡಿ. 10 ಮತ್ತು 11 ರಂದು ರಾಷ್ಟ್ರೀಯ ಶಿಕ್ಷಣ ನೀತಿ-2020 ಕುರಿತು ಎರಡು ದಿನಗಳ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಸಾರ್ವಜನಿಕ ಸಂಪರ್ಕ ಡೀನ್ ಡಾ| ಜಿ.ಪಿ. ದೇಸಾಯಿ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯದ ಸಹಯೋಗದಲ್ಲಿ ಹಮ್ಮಿಕೊಂಡಿರುವ ಈ ಕಾರ್ಯಾಗಾರದಲ್ಲಿ ರಾಜ್ಯದ ವಿವಿಧ ತಾಂತ್ರಿಕ ಮಹಾವಿದ್ಯಾಲಯಗಳ 400ಕ್ಕೂ ಅಧಿಕ ಉಪನ್ಯಾಸಕರು ಭಾಗವಹಿಸುವರು. ಕೊರೊನಾ ನಿಯಮಾವಳಿಗಳಂತೆ ಆಫ್ ಮತ್ತು ಆನ್‌ಲೈನ್‌ನಲ್ಲಿ ಕಾರ್ಯಾಗಾರ ಆಯೋಜಿಸಲಾಗಿದೆ ಎಂದರು. ಶಿಕ್ಷಣ ವ್ಯವಸ್ಥೆ ಮತ್ತು ನೀತಿಗಳು ಕಾಲಕ್ಕೆ ಅನುಗುಣವಾಗಿ ಹೊಸ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಆ ನಿಟ್ಟಿನಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಸಮಗ್ರ ಬದಲಾವಣೆ ತಂದು ಆಧುನೀಕರಣಗೊಳಿಸಲು ರಾಷ್ಟ್ರೀಯ ಶಿಕ್ಷಣ ನೀತಿ-2020 ರೂಪಿಸಲಾಗಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020ಯನ್ನು ಅರ್ಥೈಸುವುದು, ವಿಶ್ಲೇಷಿಸುವುದು, ಕೌಶಲ್ಯ ತರಬೇತಿ, ಉದ್ಯಮ ಮತ್ತು ಶಿಕ್ಷಣ ಕ್ಷೇತ್ರದ ನಡುವಿನ ಅಂತರ ಕಡಿಮೆ ಮಾಡುವುದು, ನೀತಿಯ ಅನುಷ್ಠಾನದಲ್ಲಿ ವಿದ್ಯಾರ್ಥಿಗಳ, ಶಿಕ್ಷಕರ, ಸಮಾಜದ ಪಾತ್ರದ ಬಗ್ಗೆ ಚರ್ಚಿಸುವ ಉದ್ದೇಶದಿಂದ ಎರಡು ದಿನಗಳ ಕಾರ್ಯಾಗಾರ ಏರ್ಪಡಿಸಲಾಗಿದೆ ಎಂದು ಹೇಳಿದರು.



ದಾವಣಗೆರೆ: ಬಿಐಇಟಿ ನಿರ್ದೇಶಕ ಪ್ರೊ| ವೈ. ವೃಷಭೇಂದ್ರಪ್ಪ, ಪ್ರಾಚಾರ್ಯ ಡಾ| ಎಚ್.ಬಿ. ಅರವಿಂದ್ ಸುದ್ದಿಗೋಷ್ಠಿ ನಡೆಸಿದರು.

ಶುಕ್ರವಾರ ಬೆಳಗ್ಗೆ 10ಕ್ಕೆ ಕಾಲೇಜಿನ ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ| ಕರಿಸಿದ್ದಪ್ಪ ಕಾರ್ಯಾಗಾರ ಉದ್ಘಾಟಿಸುವರು. ಕುಲಸಚಿವ ಡಾ| ಎ.ಎಸ್. ದೇಶಪಾಂಡೆ, ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ| ಕೆ. ಸಿದ್ದಪ್ಪ, ಬಿಐಇಟಿ ನಿರ್ದೇಶಕ ಪ್ರೊ| ವೈ. ವೃಷಭೇಂದ್ರಪ್ಪ, ಪ್ರಾಚಾರ್ಯ ಡಾ| ಎಚ್.ಬಿ. ಅರವಿಂದ್ ಇತರರು ಭಾಗವಹಿಸುವರು ಎಂದರು. ಡಾ| ನಿರ್ಮಲಾ ಮಾತನಾಡಿ, ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತಿನಿಂದ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಮಾನ್ಯತಾ ಮಂಡಳಿ ರೂಪಿಸಿರುವ ಮಾನದಂಡಗಳಂತೆ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿದೆ. ಹಲವಾರು ಅಂಶಗಳ ಆಧಾರದಲ್ಲಿ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯಕ್ಕೆ ರಾಷ್ಟ್ರೀಯ ಮನ್ನಣೆ ದೊರೆತಿದೆ. ಅಖಿಲ ಭಾರತ ಮಟ್ಟದಲ್ಲಿ 57, ರಾಜ್ಯ ಮಟ್ಟದಲ್ಲಿ 14ನೇ ರ್‍ಯಾಂಕ್ ದೊರೆತಿದೆ ಎಂದು ತಿಳಿಸಿದರು.

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಅಭ್ಯಾಸ ಮಾಡಿರುವ ಮತ್ತು ಮಾಡುತ್ತಿರುವ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು 64ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ಪಡೆದಿದ್ದಾರೆ. ಸಿಂಗಾಪುರ ಮೂಲದ ಕಂಪನಿಗಳಲ್ಲೂ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಉನ್ನತ ಮಟ್ಟದ ಹುದ್ದೆಗಳಿಗೆ ಆಯ್ಕೆಯಾಗಿದ್ದಾರೆ ಎಂದರು. ಬಿಐಇಟಿ ನಿರ್ದೇಶಕ ಪ್ರೊ| ವೈ. ವೃಷಭೇಂದ್ರಪ್ಪ, ಪ್ರಾಚಾರ್ಯ ಡಾ| ಎಚ್.ಬಿ. ಅರವಿಂದ್, ಕಲ್ಲೇಶಪ್ಪ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

ನಗರವಾಣಿ 10-12-2021

# ಡಿ.10 – 11 ರಂದು ಬಿಐಇಟಿ ಕಾಲೇಜಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ–2020 ಕಾರ್ಯಾಗಾರ




ದಾವಣಗೆರೆ,ಡಿ.9: ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಆವರಣದ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಡಿ.10 ಮತ್ತು 11 ರಂದು ರಾಷ್ಟ್ರೀಯ ಶಿಕ್ಷಣ ನೀತಿ–2020 ಕುರಿತು ವಿಶೇಷ ತರಬೇತಿ ಕಾರ್ಯಾಗಾರ ನಡೆಯಲಿದೆ ಎಂದು ಮಹಾವಿದ್ಯಾಲಯದ ನಿರ್ದೇಶಕ ವೈ ವೃಷಬೇಂದ್ರಪ್ಪ, ಪ್ರಾಂಶುಪಾಲ ಡಾ॥ ಹೆಚ್ ಬಿ ಅರವಿಂದ್ ಹಾಗೂ ಸಾರ್ವಜನಿಕ ಸಂಪರ್ಕ ಡೀನ್ ಡಾ. ಜಿ.ಪಿ.ದೇಸಾಯಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋವಿಡ್–19ರ ನಿಯಮಾವಳಿಗಳಂತೆ ಆನ್‌ಲೈನ್ ಮತ್ತು ಆಫ್‌ಲೈನ್ ಎರಡೂ ರೀತಿಯಲ್ಲಿ ತರಬೇತಿ ಕಾರ್ಯಾಗಾರ ಆಯೋಜಿಸಲಾಗಿದ್ದು, ಹೊಸ ಶಿಕ್ಷಣ ನೀತಿ–2020ನ್ನು ಅರ್ಥೈಸುವುದು, ಮತ್ತು ವಿಶ್ಲೇಷಿಸುವುದು, ಕೌಶಲ್ಯ ತರಬೇತಿ, ಉದ್ಯಮ ಮತ್ತು ಶಿಕ್ಷಣ ಕ್ಷೇತ್ರದ ನಡುವಿನ ಅಂತರ ಕಡಿಮೆ ಮಾಡುವುದು, ನೀತಿಯ ಅನುಷ್ಠಾನದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಮಾಜದ ಪಾತ್ರವನ್ನು ಚರ್ಚಿಸುವುದು ಕಾರ್ಯಾಗಾರದ ಪ್ರಮುಖ ಉದ್ದೇಶವಾಗಿದೆ ಎಂದರು.

ಹೊಸ ಶಿಕ್ಷಣ ನೀತಿಯು ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣಕ್ಕೆ ಸಮಗ್ರ ಚೌಕಟ್ಟಾಗಿದ್ದು, ಭಾರತದ ಗ್ರಾಮೀಣ ಮತ್ತು ನಗರ ಪ್ರದೇಶದ ವಿದ್ಯಾರ್ಥಿಗಳ ವೃತ್ತಿಪರ ತರಬೇತಿ ಮಟ್ಟವನ್ನು ಹೆಚ್ಚಿಸಲು ಸಹಕಾರಿಯಾಗಿದ್ದು, ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಭಾರತದ ಅನೇಕ ಸ್ಥಳಗಳಲ್ಲಿ ವಿಸ್ತೃತ ಚರ್ಚೆಗಳು ಆರಂಭವಾಗಿವೆ. ಈ ಕುರಿತು ಅರ್ಥಪೂರ್ಣ ಚರ್ಚೆಗೆ ವೇದಿಕೆ ಒದಗಿಸಲು ಎರಡು ದಿನಗಳ ವಿಶೇಷ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ರಾಜ್ಯದ ವಿವಿಧ ತಾಂತ್ರಿಕ ಮಹಾವಿದ್ಯಾಲಯಗಳ ಸುಮಾರು 400 ಜನ ಉಪನ್ಯಾಸಕರು ಕಾರ್ಯಾಗಾರದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಡಿ.10ರ ಇಂದು ಬೆಳಿಗ್ಗೆ 10 ಗಂಟೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಕುಲಪತಿ ಡಾ. ಕರಿಸಿದ್ದಪ್ಪ, ಕುಲಸಚಿವರಾದ ಡಾ. ಎ.ಎಸ್. ದೇಶಪಾಂಡೆ, ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಕೆ.ಸಿದ್ದಪ್ಪ, ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ.ವೈ.ವೃಷಬೇಂದ್ರಪ್ಪ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಪ್ರಾಂಶುಪಾಲ ಡಾ. ಹೆಚ್.ಬಿ.ಅರವಿಂದ್ ಅಧ್ಯಕ್ಷತೆ ವಹಿಸಲಿದ್ದಾರೆ. ಡಿ.11 ರಂದು ಮಧ್ಯಾಹ್ನ 3 ಗಂಟೆಗೆ ಸಮಾರೋಪ ನಡೆಯಲಿದೆ ಎಂದರು.

ಬಿಐಇಟಿ ಕಾಲೇಜಿಗೆ ರಾಷ್ಟ್ರೀಯ ಮನ್ನಣೆ: ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯಕ್ಕೆ ಅಖಿಲ ಭಾರತೀಯ 57ನೇ ರ್‍ಯಾಂಕ್ ಹಾಗೂ ರಾಜ್ಯಮಟ್ಟದಲ್ಲಿ 14ನೇ ರ್‍ಯಾಂಕ್ ದೊರೆತಿದ್ದು, ಸಂಸ್ಥೆಗೆ ಹೆಮ್ಮೆಯ ಗರಿ ಮೂಡಿಸಿದೆ ಎಂದು ಇದೇ ಸಂದರ್ಭದಲ್ಲಿ ಅವರು ತಿಳಿಸಿದರು.

ಭಾರತದ ಎಜ್ಯುಕೇಷನ್ ಪೋಸ್ಟ್ ಎನ್ನುವ ಪ್ರಸಿದ್ಧ ಶೈಕ್ಷಣಿಕ ಮಾಸಿಕ ಸಂಚಿಕೆ ಮಾನದಂಡಗಳ ಪ್ರಕಾರ ಭಾರತದ ಎಲ್ಲಾ ಖಾಸಗಿ ಮತ್ತು ಸರ್ಕಾರಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಪ್ರತ್ಯೇಕ ಐಐಆರ್‌ಎಫ್ ರ್‍ಯಾಂಕ್ ನೀಡಿ ನೀಡಿ ವಿವರಗಳನ್ನು ಜುಲೈ–ಆಗಸ್ಟ್ 2021ರ ಸಂಚಿಕೆಯಲ್ಲಿ ಪ್ರಕಟಿಸಿದೆ. ಅಲ್ಲದೇ ಈ ರ್‍ಯಾಂಕ್ ನೀಡಲು ಅನುಸರಿಸಿದ ವಿವರಗಳನ್ನು ವೆಬ್‌ಸೈಟ್‌ನಲ್ಲೂ ಪ್ರಕಟಿಸಲಾಗಿದೆ ಎಂದರು.

ಎಜ್ಯುಕೇಷನ್ ಪೋಸ್ಟ್ ಶೈಕ್ಷಣಿಕ ಮಾಸಿಕ ಸಂಚಿಕೆ ನಮ್ಮ ಶಿಕ್ಷಣ ವ್ಯವಸ್ಥೆ ಹಾಗೂ ಸಂಸ್ಥೆಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಒದಗಿಸುತ್ತದೆ. ಮತ್ತು ಅದರದೇ ಆದ ಮಾನದಂಡಗಳ ಪ್ರಕಾರ ಶಿಕ್ಷಣ ಸಂಸ್ಥೆಗಳ ಗುಣಮಟ್ಟವನ್ನು ನಿರ್ಧರಿಸಿ ಪ್ರಕಟಿಸುತ್ತದೆ. ಈ ಮಾನದಂಡಗಳು ವಿದ್ಯಾರ್ಥಿಗಳ ಉದ್ಯೋಗ ನಿಯೋಜನೆ, ಬೋಧನಾ ವಿಧಾನ ಮತ್ತು ಪರಿಕರಗಳು, ಸಂಶೋಧನೆಗಳು, ಉದ್ಯಮಗಳ ಜೊತೆಗೆ ಸಂಸ್ಥೆಯ ಸಂಬಂಧ, ಮುಂದಿನ ಗುರಿಗಳು ಮತ್ತು ಅಂತರ ರಾಷ್ಟ್ರೀಯ ಮೇಲ್ನೋಟ ಮೊದಲಾದ ಅಂಶಗಳನ್ನು ಒಳಗೊಂಡಿವೆ ಎಂದು ತಿಳಿಸಿದರು. ಡಾ.ನಿರ್ಮಲ, ಕಲ್ಲೇಶಪ್ಪ ಸುದ್ದಿಗೋಷ್ಠಿಯಲ್ಲಿದ್ದರು.

# ರಾಷ್ಟ್ರೀಯ ಶಿಕ್ಷಣ ನೀತಿ: ಇಂದು ಬಿಐಇಟಿಯಲ್ಲಿ ಕಾರ್ಯಾಗಾರ

ದಾವಣಗೆರೆ, ಡಿ.9- ಬಿಐಇಟಿ ಕಾಲೇಜಿನ ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಸಭಾಂಗಣದಲ್ಲಿ ಡಿ.10 ಹಾಗೂ 11 ರಂದು ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಎರಡು ದಿನಗಳ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಸಾರ್ವಜನಿಕ ಸಂಪರ್ಕ ಡೀನ್ ಡಾ.ಜಿ.ಪಿ. ದೇಸಾಯಿ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ದಿನಾಂಕ 10ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಉದ್ಘಾಟನೆಗೊಳ್ಳಲಿರುವ ಕಾರ್ಯಾಗಾರದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಕುಲಪತಿ ಡಾ.ಕರಿಸಿದ್ದಪ್ಪ, ಕುಲಸಚಿವ ಡಾ.ಎ.ಎಸ್. ದೇಶಪಾಂಡೆ, ಬೆಂಗಳೂರು ವಿವಿ ವಿಶ್ರಾಂತ ಕುಲಪತಿ ಡಾ.ಕೆ. ಸಿದ್ದಪ್ಪ, ಬಿಐಇಟಿ ಕಾಲೇಜು ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದರು.

**ಬಿಇಐಟಿಗೆ ರಾಷ್ಟ್ರೀಯ ಮನ್ನಣೆ:** ಬಿಐಇಟಿ ಕಾಲೇಜಿಗೆ ನ್ಯಾಕ್ ಎ ಶ್ರೇಣಿಯನ್ನು ನೀಡಿ ಪುರಸ್ಕರಿಸಿದೆ ಹಾಗೂ ಎನ್‌ಬಿಎ ತಜ್ಞರ ಸಮಿತಿ ಕಳೆದ ತಿಂಗಳು ಕಾಲೇಜಿಗೆ ಭೇಟಿ ನೀಡಿದೆ ಎಂದು ದೇಸಾಯಿ ಅವರು ಹೇಳಿದರು.

ಬೋಧನೆ, ಸಂಶೋಧನೆ, ಉದ್ಯಮಗಳ ಜೊತೆಗೆ ಸಂಸ್ಥೆಯ ಸಂಬಂಧ ಗುರಿಗಳು, ಅಂತರರಾಷ್ಟ್ರೀಯ ಮೇಲ್ನೋಟ ಇತ್ಯಾದಿ ಅಂಶ ಒಳಗೊಂಡ ಮಾನದಂಡಗಳ ಪ್ರಕಾರ ಭಾರತದ ಎಲ್ಲಾ ಖಾಸಗಿ ಮತ್ತು ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ಪ್ರತ್ಯೇಕ ರ್‍ಯಾಂಕ್ ನೀಡಿ 'ಎಜುಕೇಷನ್ ಪೋಸ್ಟ್' ಶೈಕ್ಷಣಿಕ ಮಾಸಿಕ ಸಂಚಿಕೆ ಪ್ರಕಟಿಸಿರುವ ರ್‍ಯಾಂಕ್‌ನಲ್ಲಿ ಬಿಐಇಟಿ ಕಾಲೇಜಿಗೆ ಅಖಿಲ ಭಾರತೀಯ 57ನೇ ರ್‍ಯಾಂಕ್ ಹಾಗೂ ರಾಜ್ಯ ಮಟ್ಟದಲ್ಲಿ 14ನೇ ರ್‍ಯಾಂಕ್ ದೊರೆತಿರುವುದು ಹೆಮ್ಮೆಯ ವಿಷಯ ಎಂದು ಹೇಳಿದರು.

ಡಾ.ಸಿ.ಆರ್. ನಿರ್ಮಲಾ ಮಾತನಾಡುತ್ತಾ, ರಾಜ್ಯದ ಟಾಪ್ 10ರೊಳಗೆ ಒಂದಾಗಿರುವ ಬಿಐಇಟಿ ಕಾಲೇಜು ಉದ್ಯೋಗ ಕಲ್ಪಿಸುವಲ್ಲೂ ಮಹತ್ತರ ಪಾತ್ರ ವಹಿಸಿದ್ದು, ಪ್ರಮುಖ ಕಂಪನಿಗಳಿಂದ ಬೇಡಿಕೆ ಬಂದಿರುವುದಾಗಿ ತಿಳಿಸಿದರು.

ಕಾಲೇಜಿನ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ಮಾತನಾಡಿದರು. ಪ್ರಾಂಶುಪಾಲ ಹೆಚ್.ಬಿ. ಅರವಿಂದ್, ಕಲ್ಲೇಶಪ್ಪ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸಂಜೆವಾಣಿ

# ಬಿಐಇಟಿಯಲ್ಲಿ ಡಿ.10–11 ರಂದು ಕಾರ್ಯಾಗಾರ




**ದಾವಣಗೆರೆ.ಡಿ.9;** ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಾಳೆ ಮತ್ತು ಡಿ.11 ರಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ವಿಶೇಷ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಸಾರ್ವಜನಿಕ ಸಂಪರ್ಕ ಡೀನ್ ಡಾ. ಜಿ.ಪಿ.ದೇಸಾಯಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿಂದು ಮಾತನಾಡಿದ ಅವರು ನಾಳೆ ಬೆಳಗ್ಗೆ 10 ಗಂಟೆಗೆ ಬಿಐಇಟಿ ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಕರಿಸಿದ್ದಪ್ಪ, ಕುಲಸಚಿವರಾದ ಡಾ. ಎ.ಎಸ್. ದೇಶಪಾಂಡೆ, ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಕೆ . ಸಿದ್ದಪ್ಪ ಮತ್ತು ಬಿ.ಐ.ಇ.ಟಿ. ಕಾಲೇಜಿನ ನಿರ್ದೇಶಕರಾದ ಪ್ರೊ. ವೈ. ವೃಷಭೇಂದ್ರಪ್ಪ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಬಿ.ಐ.ಇ.ಟಿ. ಪ್ರಾಂಶುಪಾಲರಾದ ಎಚ್.ಬಿ.ಅರವಿಂದ ಸಮಾರಂಭದ ಅಧ್ಯಕ್ಷತೆ ವಹಿಸುವರು. ಶಿಕ್ಷಣವು ಪ್ರತಿಯೊಬ್ಬ ವ್ಯಕ್ತಿಯ ಹಕ್ಕಾಗಿದ್ದು, ಅವರ ಜೀವನವನ್ನು ರೂಪಿಸುವುದರಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ . ಶಿಕ್ಷಣ ವ್ಯವಸ್ಥೆ ಮತ್ತು ನೀತಿಗಳು ಕಾಲಕ್ಕೆ ಅನುಗುಣವಾಗಿದ್ದು ನವೀನ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ . ಈ ನಿಟ್ಟಿನಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಸಮಗ್ರ ಬದಲಾವಣೆ ತಂದು ಆಧುನೀಕರಣಗೊಳಿಸಲು ರಾಷ್ಟ್ರೀಯ ಶಿಕ್ಷಣ ನೀತಿ –2020 ನ್ನು ರೂಪಿಸಲಾಗಿದೆ. ಹೊಸ ಶಿಕ್ಷಣ ನೀತಿಯು, ಹೊಸ ಶಿಕ್ಷಣ ನೀತಿಯು ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣಕ್ಕೆ ಸಮಗ್ರ ಚೌಕಟ್ಟಾಗಿದ್ದು, ಭಾರತದ ಗ್ರಾಮೀಣ ಮತ್ತು ನಗರ ಪ್ರದೇಶದ ವಿದ್ಯಾರ್ಥಿಗಳ ವೃತ್ತಿಪರ ತರಬೇತಿ ಮಟ್ಟವನ್ನು ಹೆಚ್ಚಿಸಲು ಸಹಕಾರಿಯಾಗಿದೆ.ರಾಜ್ಯದ ವಿವಿಧ ತಾಂತ್ರಿಕ ಮಹಾವಿದ್ಯಾಲಯಗಳ ಸುಮಾರು 400 ಜನ ಉಪನ್ಯಾಸಕರು ಈ ಕಾರ್ಯಾಗಾರದಲ್ಲಿ ಭಾಗವಹಿಸಲಿದ್ದಾರೆ. ಕೋವಿಡ್ –19 ರ ನಿಯಮಾವಳಿಗಳಂತೆ, ಈ ಕಾರ್ಯಾಗಾರವನ್ನು ಆನ್ ಲೈನ್ ಮತ್ತು ಆಫ್ ಲೈನ್ ಎರಡೂ ರೀತಿಯಲ್ಲಿ ಆಯೋಜಿಸಲಾಗಿದೆ. ಈ ಕಾರ್ಯಾಗಾರದ ಉದ್ದೇಶ ಹೊಸ ಶಿಕ್ಷಣ ನೀತಿ 2020 ನ್ನು ಅರ್ಥೈಸುವುದು ಮತ್ತು ವಿಶ್ಲೇಷಿಸುವುದು, ಕೌಶಲ್ಯ ತರಬೇತಿ, ಉದ್ಯಮ ಮತ್ತು ಶಿಕ್ಷಣ ಕ್ಷೇತ್ರದ ನಡುವಿನ ಅಂತರ ಕಡಿಮೆ ಮಾಡುವುದು , ನೀತಿಯ ಅನುಷ್ಠಾನದಲ್ಲಿ ವಿದ್ಯಾರ್ಥಿಗಳ , ಶಿಕ್ಷಕರ ಮತ್ತು ಸಮಾಜದ ಪಾತ್ರವನ್ನು ಚರ್ಚಿಸುವುದು ಮುಂತಾದವುಗಳಾಗಿವೆ ಎಂದರು.

ಬಿಐಇಟಿ ಕಾಲೇಜಿಗೆ ಅಖಿಲ ಭಾರತೀಯ 57 ನೇ ರ್ಯಾಂಕ್ ಹಾಗೂ ರಾಜ್ಯ ಮಟ್ಟದಲ್ಲಿ 14 ನೇ ರ್ಯಾಂಕ್ ದೊರೆತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರಾಂಶುಪಾಲ ಡಾ.ಹೆಚ್.ಬಿ ಅರವಿಂದ್, ಪ್ರೊ.ವೈ.ವೃಷಬೇಂದ್ರಪ್ಪ,ಸಿ.ಆರ್ ನಿರ್ಮಲ, ಕಲ್ಲೇಶಪ್ಪ ಇದ್ದರು.

Janathavani 11-12-2021

# ನೂತನ ಶಿಕ್ಷಣ ನೀತಿ ಅನುಷ್ಠಾನದಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು



## ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ ಕುರಿತ ಕಾರ್ಯಾಗಾರದಲ್ಲಿ ವಿಟಿಯು ಉಪಕುಲಪತಿ ಡಾ.ಕರಿಸಿದ್ದಪ್ಪ

ದಾವಣಗೆರೆ, ಡಿ.10- ನೂತನ ಶಿಕ್ಷಣ ನೀತಿ ಸಮರ್ಪಕವಾಗಿ ಅನುಷ್ಠಾನಗೊಳ್ಳಬೇಕಾದರೆ ಶಿಕ್ಷಕರ ಪಾತ್ರ ಮಹತ್ವದ್ದು. ನೂತನ ನೀತಿಯ ಒಳಹರಿವುಗಳನ್ನು ಅರ್ಥ ಮಾಡಿಕೊಂಡು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದು ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ಉಪಕುಲಪತಿ ಡಾ.ಕರಿಸಿದ್ದಪ್ಪ ಹೇಳಿದರು.

ನಗರದ ಬಿಐಇಟಿ ಕಾಲೇಜಿನ ಎಸ್‌ಎಸ್ ಮಲ್ಲಿಕಾರ್ಜುನ್ ಸಾಂಸ್ಕೃತಿಕ ಭವನದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ ಕುರಿತ ಎರಡು ದಿನಗಳ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದೇಶದಲ್ಲಿಯೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಕ್ಕೆ ತಂದಿದ್ದು ಕರ್ನಾಟಕದಲ್ಲಿ. ಮುಖ್ಯಮಂತ್ರಿಗಳು, ಶಿಕ್ಷಣ ಸಚಿವರು ಹಾಗೂ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳು ನೂತನ ನೀತಿಯನ್ನು ಚಾಲೆಂಜ್ ಆಗಿ ಸ್ವೀಕರಿಸಿದ್ದಾರೆ ಎಂದರು.

ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಡಾ.ಎ.ಎಸ್. ದೇಶಪಾಂಡೆ ಮಾತನಾಡುತ್ತಾ, ದೇಶದಲ್ಲಿನ 850ಕ್ಕೂ ಹೆಚ್ಚು ವಿಶ್ವವಿದ್ಯಾನಿಲಯಗಳು, 40 ಸಾವಿರ ಶಿಕ್ಷಣ ಸಂಸ್ಥೆಗಳ ಪೈಕಿ ಸುಮಾರು 15 ಸಾವಿರ ಕಾಲೇಜುಗಳು ಮಾತ್ರ ಉತ್ತಮ ಶಿಕ್ಷಣ ನೀಡುತ್ತಿವೆ. ಪ್ರಪಂಚದಲ್ಲಿಯೇ ಅತಿ ಹೆಚ್ಚು ಜನ ಸಂಖ್ಯೆಯುಳ್ಳ ಎರಡನೇ ದೇಶವಾದ ಭಾರತವನ್ನು ನೂತನ ಶಿಕ್ಷಣ ನೀತಿ ಅನುಷ್ಠಾನದಿಂದ ಪ್ರಪಂಚದಲ್ಲಿಯೇ ಉತ್ತಮ ಶಿಕ್ಷಣ ನೀಡುವ ದೇಶವನ್ನಾಗಿ ರೂಪಿಸುವ ಉದ್ದೇಶ ಹೊಂದಲಾಗಿದೆ ಎಂದರು.

ಬೆಂಗಳೂರು ವಿಶ್ವವಿದ್ಯಾನಿಲಯದ ಮಾಜಿ ಉಪ ಕುಲಪತಿ ಡಾ.ಕೆ. ಸಿದ್ದಪ್ಪ ಮಾತನಾಡುತ್ತಾ, ಯಾವುದೇ ಒಂದು ದೇಶದ ಶಿಕ್ಷಣ ವ್ಯವಸ್ಥೆಯನ್ನು ದುರ್ಬಲಗೊಳಿಸಿದಲ್ಲಿ ಆ ದೇಶವನ್ನು ಸರ್ವನಾಶ ಮಾಡಬಹುದು ಎಂಬುದನ್ನು ಇತಿಹಾಸದ ಪುಟಗಳಲ್ಲಿ ನೋಡುತ್ತೇವೆ.

ಹಾಗೆಯೇ ಒಂದು ಸಮಾಜ ಹಾಗೂ ದೇಶದ ಅಭಿವೃದ್ಧಿಯಲ್ಲೂ ಶಿಕ್ಷಣ ಮಹತ್ತರ ಪಾತ್ರ ವಹಿಸುತ್ತದೆ. ಬದಲಾಗುತ್ತಿರುವ ಸನ್ನಿವೇಶ, ತಂತ್ರಜ್ಞಾನಗಳಿಗೆ ಅನುಗುಣವಾಗಿ ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ನೂತನ ಶಿಕ್ಷಣ ನೀತಿ ಸಹಕಾರಿಯಾಗಿದೆ ಎಂದರು.

ಭಾಷೆ ಬೆಳೆಯುತ್ತಾ ಸಾಗಿದಂತೆ ಗುರುಗಳಿಂದ ಕೇಳುತ್ತಿದ್ದ ಶಿಕ್ಷಣ ನಂತರ ಬರವಣಿಗೆ ರೂಪಕ್ಕೆ ತಾಳಿತು. 70ರ ದಶಕದಲ್ಲಿ ಕೆಲವೇ ಪುಸ್ತಕದ ಪ್ರತಿಗಳಿರುತ್ತಿದ್ದವು. ತಂತ್ರಜ್ಞಾನ ಬೆಳೆದಂತೆ ಮಾಹಿತಿ ಸಿಗುವ ಪ್ರಕಾರಗಳೂ ಹೆಚ್ಚುತ್ತಿವೆ. ಇ-ಬುಕ್‌ಗಳು ಲಭ್ಯವಿವೆ. ಗೂಗಲ್ ಗುರು ನಮ್ಮ ಕೈಯ್ಯಲ್ಲಿದ್ದಾನೆ.

ಇದರೊಂದಿಗೆ ಉನ್ನತ ಸಮಗ್ರತೆ ಮತ್ತು ನೈತಿಕ ಮೌಲ್ಯಗಳೊಂದಿಗೆ ರಾಷ್ಟ್ರ ನಿರ್ಮಾಣಕ್ಕೆ ಸಹಾಯ ಮಾಡುವ ಪದವೀಧರರು ಹಾಗೂ ಸ್ನಾತಕೋತ್ತರ ಪದವೀಧರರನ್ನು ತಯಾರಿಸಲು ಸಂಪೂರ್ಣ ಶಿಕ್ಷಣ ವ್ಯವಸ್ಥೆಯನ್ನು ಪುನರ್‌ರಚಿಸುವ ಕೆಲಸವನ್ನು ನೂತನ ಶಿಕ್ಷಣ ನೀತಿ ಮಾಡುತ್ತಿದೆ ಎಂದರು.

ಕೊಠಡಿ ಒಳಗಷ್ಟೇ ಅಲ್ಲದೆ, ಅದರ ಹೊರತಾಗಿಯೂ ವಿದ್ಯಾರ್ಥಿಗಳು ಶಿಕ್ಷಕರ ಪಾಠ ಕೇಳುವಂತಹ ಕುತೂಹಲಕರ ವಾತಾವರಣ ಕಲ್ಪಿಸಬೇಕಾಗಿರವ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದು ಕಿವಿ ಮಾತು ಹೇಳಿದರು.

ಬಿಐಇಟಿ ಕಾಲೇಜು ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್, ಬಿಐಇಟಿ ಕಾಲೇಜು ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ನಿರ್ದೇಶಕ ಡಾ.ಎಸ್.ಮಂಜಪ್ಪ, ಬಿಐಇಟಿ ಸಾರ್ವಜನಿಕ ಸಂಪರ್ಕ ಡೀನ್ ಡಾ.ಜಿ.ಪಿ. ದೇಸಾಯಿ ಇತರರು ಉಪಸ್ಥಿತರಿದ್ದರು.

Vijayavani 11-12-2021

# ಬದಲಾಗಬೇಕು ಶಿಕ್ಷಣ ವ್ಯವಸ್ಥೆ

## ವಿಟಿಯು ಕುಲಪತಿ ಡಾ. ಕರಿಸಿದ್ದಪ್ಪ ಅನಿಸಿಕೆ | ಎನ್‌ಇಪಿ ಅನುಷ್ಠಾನ ಕುರಿತ ಕಾರ್ಯಾಗಾರ

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ಹಿನ್ನೆಲೆಯಲ್ಲಿ ಶಾಲಾ ಶಿಕ್ಷಕರು, ವಿ.ವಿ. ಶಿಕ್ಷಕರು ಹಾಗೂ ಆಡಳಿತ ವಿಭಾಗದವರು ಬದಲಾವಣೆಗಳಿಗೆ ಒಗ್ಗಿಕೊಳ್ಳಬೇಕಿದೆ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಕುಲಪತಿ ಡಾ. ಕರಿಸಿದ್ದಪ್ಪ ಹೇಳಿದರು.

ಇಲ್ಲಿನ ಬಿಐಇಟಿ ಕಾಲೇಜಿನ ಮಲ್ಲಿಕಾರ್ಜುನ ಸಾಂಸ್ಕೃತಿಕ ಭವನದಲ್ಲಿ ಶುಕ್ರವಾರ, ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಇಂದಿನ ಶಿಕ್ಷಣ ಪರಿಸ್ಥಿತಿ ಅವಲೋಕಿಸಿದಾಗ ಹಲವಾರು ವಲಯಗಳಲ್ಲಿ ರೂಪಾಂತರದ ಅಗತ್ಯವಿದೆ. ನಿರಂತರ ಕಲಿಕೆ ಭಾಗವಾಗಿ ಪ್ರವರ್ಧಮಾನಕ್ಕೆ ಬರುತ್ತಿರುವ ತಂತ್ರಜ್ಞಾನ, ಬದಲಾದ ಕಲಿಕೆಯ ವಿಧಾನಗಳಿಗೆ ಅನುಗುಣವಾಗಿ ಮಾರ್ಪಾಡಾಗಬೇಕಿದೆ ಎಂದು ಆಶಿಸಿದರು.

ಮೊದಲ ಬಾರಿಗೆ ಕರ್ನಾಟಕ ಎನ್‌ಇಪಿ ಜಾರಿಗೊಳಿಸಿದ್ದು, ಅಧ್ಯಾಪಕರಿಂದ ಹಿಡಿದು ವಿ.ವಿ.ಗಳ ಕುಲಪತಿಗಳು, ಮುಖ್ಯಮಂತ್ರಿಯವರೆಗೆ ಅನೇಕರು ಇದರ ಹೆಗ್ಗಳಿಕೆಗೆ ಕಾರಣರಾಗಿದ್ದಾರೆ. ಇದರ ಜಾರಿಯಲ್ಲಿನ ಸವಾಲುಗಳನ್ನೂ ಎದುರಿಸಬೇಕಿದೆ ಎಂದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಕುಲಸಚಿವ ಡಾ. ಎ.ಎಸ್.ದೇಶಪಾಂಡೆ ಮಾತನಾಡಿ, ದೇಶದ 450 ವಿವಿಗಳ ವ್ಯಾಪ್ತಿಗಳಲ್ಲಿ ಸುಮಾರು 40 ಸಾವಿರದಷ್ಟು ಉನ್ನತ ಶಿಕ್ಷಣ ಸಂಸ್ಥೆಗಳಿವೆ. ಇದರಲ್ಲಿ ಮುಂದಿನ 2040 ನೇ ವರ್ಷದಲ್ಲಿ 15 ಸಾವಿರ ಸಂಸ್ಥೆಗಳು ಮಾತ್ರ ಉಳಿಯಬಲ್ಲವು. ಶೈಕ್ಷಣಿಕ ಗುಣಮಟ್ಟ, ಉತ್ತಮ ಮೌಲ್ಯಮಾಪನ ಮೊದಲಾದ ಸಾಮರ್ಥ್ಯಗಳ ಮೇಲೆ ಇದು ನಿರ್ಧಾರವಾಗಲಿವೆ. ಹೀಗಾಗಿ ಎನ್‌ಇಪಿಯತ್ತ ಗಮನ ನೀಡಬೇಕಿದೆ ಎಂದರು.

ಭಾರತ, ಶ್ರೀಮಂತ ಪರಂಪರೆ ಹೊಂದಿದ ದೇಶ. ರಾಷ್ಟ್ರೀಯ ಶಿಕ್ಷಣ ನೀತಿ ಅಳವಡಿಕೆಯೊಂದಿಗೆ ಅದರತ್ತ ಹೊರಳುವ ಸಂಭವವಿದೆ. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪ್ರಧಾನ ಪಾತ್ರಧಾರಿಗಳಾದ ಶಿಕ್ಷಕರಲ್ಲಿ ಪೂರ್ವ ತಯಾರಿ ಬೇಕು. ಶೈಕ್ಷಣಿಕವಾಗಿ ಉತ್ತಮ ಪರಿಸರ ಸೃಷ್ಟಿಸಬೇಕು ಎಂದು ಹೇಳಿದರು.



ದಾವಣಗೆರೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ ಕುರಿತ ಕಾರ್ಯಾಗಾರವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಕುಲಪತಿ ಡಾ. ಕರಿಸಿದ್ದಪ್ಪ ಉದ್ಘಾಟಿಸಿದರು. ಕುಲಸಚಿವ ಡಾ. ಎ.ಎಸ್.ದೇಶಪಾಂಡೆ, ಬೆಂಗಳೂರು ವಿವಿ ವಿಶ್ರಾಂತ ಕುಲಪತಿ ಡಾ. ಕೆ. ಸಿದ್ದಪ್ಪ, ಡಾ.ಎಸ್.ಮಂಜಪ್ಪ, ಪ್ರೊ.ವೈ.ವೃಷಭೇಂದ್ರಪ್ಪ, ಡಾ.ಎಚ್.ಬಿ.ಅರವಿಂದ್ ಇತರರಿದ್ದರು.

ಬೆಂಗಳೂರು ವಿವಿ ವಿಶ್ರಾಂತ ಕುಲಪತಿ ಡಾ. ಕೆ. ಸಿದ್ದಪ್ಪ ಮಾತನಾಡಿ, ಯಾವುದೇ ದೇಶದ ವಿನಾಶಕ್ಕೆ ಮದ್ದು-ಗುಂಡು ಬೇಕಿಲ್ಲ, ಬದಲಾಗಿ ಅಲ್ಲಿನ ಶಿಕ್ಷಣ ವ್ಯವಸ್ಥೆ ದುರ್ಬಲವಾದರೂ ಸಾಕು ಎಂಬ ಮಾತಿದೆ. ಆಯಾ ದೇಶದ ಇತಿಹಾಸವು ಅಲ್ಲಿನ ಶೈಕ್ಷಣಿಕ ಪ್ರಗತಿಯನ್ನು ಅವಲಂಬಿಸಿದೆ. ಎನ್‌ಇಪಿ ಕೂಡ ಈ ನಿಟ್ಟಿನಲ್ಲಿ ಅತ್ಯಂತ ಅಗತ್ಯವಿದೆ ಎಂದರು.

ಮೊದಲೆಲ್ಲ ಗುರುವೇ ಜ್ಞಾನದ ಕೇಂದ್ರವಾಗಿದ್ದ. ಇಂದಿನ ಡಿಜಿಟಲ್ ಯುಗದಲ್ಲಿ ಕಲಿಕಾ ಮಾಧ್ಯಮಗಳೂ ಬದಲಾಗಿವೆ. ಇ-ಬುಕ್, ಇ-ಜರ್ನಲ್‌ನಂತಹ ತಂತ್ರಜ್ಞಾನ ಎಲ್ಲರ ಕೈಯೊಳಗೆ ಬಂದು ನಿಂತಿದೆ. ಇವುಗಳ ಮೂಲಕ ಕಲಿಕೆಯ ಮಟ್ಟ ಹೆಚ್ಚಿಸಿಕೊಳ್ಳುವುದೇ ರಾಷ್ಟ್ರೀಯ ಶಿಕ್ಷಣ ನೀತಿಯ ಉದ್ದೇಶವಾಗಿದೆ ಎಂದು ಹೇಳಿದರು.

ಎನ್‌ಇಪಿ ಜಾರಿ ಸರಳವಲ್ಲ. ಅನುಷ್ಠಾನದ ಹಂತದಲ್ಲಿ ಅನೇಕ ಸವಾಲುಗಳನ್ನು ಎದುರಿಸಬೇಕಿದೆ. ಮೊದಲು ಜನರು, ಶಿಕ್ಷಕರ ದೃಷ್ಟಿಕೋನ ಬದಲಾಯಿಸಬೇಕಿದೆ. ಇಂದಿನ ಡಿಜಿಟಲ್ ಮಧ್ಯಸ್ಥಿಕೆಯೊಂದಿಗೆ ಪೂರಕ ಪಠ್ಯಕ್ರಮ ಆಗಬೇಕಿದೆ. ಶಿಕ್ಷಕರಲ್ಲಿ ಬದ್ಧತೆ, ರಚನಾತ್ಮಕ ಮೌಲ್ಯಮಾಪನ, ಶಿಕ್ಷಣ ಶಾಸ್ತ್ರದಲ್ಲಿ ಉತ್ತೇಜನ ಅಗತ್ಯವಾಗಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಮಂಗಳೂರಿನ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ನಿರ್ದೇಶಕ ಡಾ.ಎಸ್. ಮಂಜಪ್ಪ, ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ್ ಇತರರಿದ್ದರು.

ಶೈಕ್ಷಣಿಕ ವಿಶ್ಲೇಷಣೆ

ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಷ್ಠಾನ ಕುರಿತ ಕಾರ್ಯಾಗಾರ ಉದ್ಘಾಟಿಸಿ ವಿಟಿಯು ಕುಲಪತಿ ಡಾ. ಕರಿಸಿದ್ದಪ್ಪ

kannada Prabha 12-12-2021

# ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನದಲ್ಲಿ ರಾಜ್ಯ ಮೊದಲು

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಅನುಷ್ಠಾನಗೊಳಿಸುವಲ್ಲಿ ಕರ್ನಾಟಕ ಮೊದಲನೇ ರಾಜ್ಯವಾಗಿದೆ. ಶಿಕ್ಷಣವು ಯಾವುದೇ ದೇಶದ ಬೆಳವಣಿಗೆಗೆ ಅತ್ಯಂತ ಮಹತ್ವವಾದ ಅಂಶವಾಗಿದೆ. ದುರ್ಬಲ ಶಿಕ್ಷಣ ನೀತಿಯು ದೇಶವನ್ನು ನಾಶಮಾಡಬಲ್ಲದಾಗಿದೆ ಎಂದು ಬೆಳಗಾವಿ ವಿಟಿಯು ಕುಲಪತಿ ಡಾ.ಕರಿಸಿದ್ದಪ್ಪ ಹೇಳಿದರು.

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿದ್ಯಾಲಯದ ಸಹಯೋಗದಲ್ಲಿ ಕಾಲೇಜಿನ ಎಸ್.ಎಸ್.ಮಲ್ಲಿಕಾರ್ಜುನಸಾಂಸ್ಕೃತಿಕಕೇಂದ್ರದಲ್ಲಿ ನಡೆದ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಷ್ಠಾನ ಕುರಿತ ಎರಡು ದಿನಗಳ ಕಾರ್ಯಾಗಾರಉದ್ಘಾಟಿಸಿಮಾತನಾಡಿದರು.



ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಕಾರ್ಯಾಗಾರವನ್ನು ಬೆಳಗಾವಿ ವಿಟಿಯು ಕುಲಪತಿ ಡಾ.ಕರಿಸಿದ್ದಪ್ಪ ಉದ್ಘಾಟಿಸಿದರು.

ಹಿಂದಿನ ಕಾಲದಲ್ಲಿ ಗುರುಗಳು ವಿದ್ಯಾರ್ಥಿಗಳಿಗೆ ಜ್ಞಾನದ ಮೂಲವಾಗಿದ್ದರು. ನಂತರದ ದಿನಗಳಲ್ಲಿ ಕಾಗದದ ಅನ್ವೇಷಣೆಯಿಂದ ಪುಸ್ತಕಗಳ ಮೂಲಕ ಮತ್ತು ಇಂದಿನ ದಿನಗಳಲ್ಲಿ ಮೊಬೈಲ್, ಟ್ಯಾಬ್ಲೆಟ್‌ಗಳ ಮೂಲಕ ಜ್ಞಾನವು ನಮ್ಮ ಜೇಬಿನಲ್ಲಿ ಎಟುಕುವಂತಾಗಿದ್ದು ವಿದ್ಯಾರ್ಥಿಗಳು ಜ್ಞಾನವನ್ನು ಗೂಗಲ್, ಇ-ಪುಸ್ತಕಗಳಿಂದ ಪಡೆಯುವಂತಾಗಿದೆ ಎಂದರು.

ವಿಟಿಯು ರಿಜಿಸ್ಟ್ರಾರ್ ಡಾ.ಆನಂದ ಎಸ್.ದೇಶಪಾಂಡೆ ಮಾತನಾಡಿ ಭಾರತ ದೇಶವು ಶಿಕ್ಷಣ ಮತ್ತು ಜನಸಂಖ್ಯೆ ವಿಷಯಗಳಲ್ಲಿ ಜಗತ್ತಿನ ಎರಡನೇ ಅತಿ ದೊಡ್ಡ ದೇಶವಾಗಿದೆ. ಇಂದು ಜಗತ್ತಿನಲ್ಲಿ ದೊಡ್ಡ ದತ್ತಾಂಶ, ಯಂತ್ರ ಕಲಿಕೆ, ಕೃತಕ ಬುದ್ಧಿವಂತಿಕೆ ಮುಂತಾದ ಕ್ಷೇತ್ರಗಳಲ್ಲಿ ಕ್ಷಿಪ್ರ ಬೆಳವಣಿಗೆಗಳು ಆಗುತ್ತಿದ್ದು ವಿದ್ಯಾರ್ಥಿಗಳಿಗೆ ಸಾಕಷ್ಟು ಅವಕಾಶಗಳು ಸಿಗುತ್ತಿವೆ. ಹವಾಮಾನ ಬದಲಾವಣೆ, ಕೋವಿಡ್-19 ಪಿಡುಗು ಮುಂತಾದುವುಗಳಿಂದ ಜೀವಶಾಸ್ತ್ರ, ರಾಸಾಯನ ಶಾಸ್ತ್ರ, ಭೌತಶಾಸ್ತ್ರಗಳನ್ನು ಒಳಗೊಂಡ ಬಹು ಶಿಸ್ತಿನ ಅಧ್ಯಯನದ ಪ್ರಾಮುಖ್ಯತೆಯ ಬಗ್ಗೆ ತಿಳಿಸಿದ ಅವರು, ಪ್ರಸ್ತುತ ದೇಶದಲ್ಲಿ 40000 ಶಿಕ್ಷಣ ಸಂಸ್ಥೆಗಳಿದ್ದು, ಮಾನ್ಯತಾ ಸಂಸ್ಥೆಗಳು ಮಾನದಂಡಗಳನ್ನು ರೂಪಿಸಿದ್ದು 2035-40ರ ಹೊತ್ತಿಗೆ ಕೇವಲ 15000 ಸಂಸ್ಥೆಗಳು ಮಾತ್ರ ಉಳಿದುಕೊಳ್ಳಲಿವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ್ ವಹಿಸಿದ್ದರು.

ಕಾಲೇಜಿನ ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ,ಡಾ.ಕೆ.ಸಿದ್ದಪ್ಪ,ಮಂಗಳೂರಿನ ಸಹ್ಯಾದ್ರಿ ಕಾಲೇಜಿನ ನಿರ್ದೇಶಕ ಡಾ.ಮಂಜಪ್ಪ, ಬೆಂಗಳೂರಿನ ಬಿಎಂಎಸ್ ಕಾಲೇಜಿನ ಪ್ರೊ.ಡಾ.ಆರ್.ವಿ.ರಂಗನಾಥ, ಡೀನ್ ಡಾ.ಜೆ.ಪಿ.ದೇಸಾಯಿ, ಇದ್ದರು. ಕರಣ ಪ್ರಾರ್ಥಿಸಿದರೆ, ಡಾ.ಸಿ.ಪಿ.ಅನಿಲ್‌ಕುಮಾರ ಸ್ವಾಗತಿಸಿದರು. ಡಾ.ಎಂ.ಎಸ್.ನಾಗರಾಜ ಅತಿಥಿಗಳನ್ನು ಪರಿಚಯಿಸಿದರು.

Vijayakarnataka 12-12-2021

# ಎನ್‌ಇಪಿ ಅನುಷ್ಠಾನ ಕರ್ನಾಟಕವೇ ಪ್ರಥಮ

■ **ವಿಕ ಸುದ್ದಿಲೋಕ** ದಾವಣಗೆರೆ



ದಾವಣಗೆರೆಯ ಬಿಐಇಟಿ ಕಾಲೇಜಿನ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಶುಕ್ರವಾರ ನಡೆದ ಕಾರ್ಯಾಗಾರವನ್ನು ಡಾ.ಕರಿಸಿದ್ದಪ್ಪ ಉದ್ಘಾಟಿಸಿದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ಪಠ್ಯ, ಶಿಕ್ಷಣ ಕಲೆ, ಮೌಲ್ಯಮಾಪನ ವಿಧಾನ, ವಿದ್ಯಾರ್ಥಿ ಸಹಾಯ ವ್ಯವಸ್ಥೆ ಎಂಬ ನಾಲ್ಕು ಪ್ರಮುಖ ಅಂಶಗಳ ಪ್ರಾಮುಖ್ಯತೆ ಮೇಲೆ ಬೆಳಕು ಚೆಲ್ಲುತ್ತದೆ ಎಂದು ಬೆಳಗಾವಿಯ ವಿಟಿಯು ಕುಲಪತಿ ಡಾ.ಕರಿಸಿದ್ದಪ್ಪ ಹೇಳಿದರು.

ನಗರದ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿಶುಕ್ರವಾರ ಬಿಐಇಟಿ ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿದ್ಯಾಲಯ ದಿಂದ ಆಯೋಜಿಸಿದ್ದ ರಾಷ್ಟ್ರೀಯ ಶಿಕ್ಷಣ ನೀತಿ-2020ರ(ಎನ್‌ಇಪಿ-2020) ಅನುಷ್ಠಾನ ಕುರಿತ ಎರಡು ದಿನಗಳ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಗೊಳಿಸುತ್ತಿರುವ ಮೊದಲ ರಾಜ್ಯ ಕರ್ನಾಟಕ ಎಂದರು.

ಹಿಂದಿನ ಕಾಲದಲ್ಲಿಗುರುಗಳು ವಿದ್ಯಾರ್ಥಿಗಳಿಗೆ ಜ್ಞಾನದ ಮೂಲವಾಗಿದ್ದರು. ನಂತರದ ದಿನಗಳಲ್ಲಿ ಕಾಗದದ ಅನ್ವೇಷಣೆಯಿಂದ ಪುಸ್ತಕಗಳ ಮೂಲಕ ಮತ್ತು ಇಂದಿನ ದಿನಗಳಲ್ಲಿ ಮೊಬೈಲ್, ಟ್ಯಾಬ್ಲೆಟ್ ಮೂಲಕ ಜ್ಞಾನವು ನಮ್ಮ ಜೇಬಿನಲ್ಲಿದೆ. ತಂತ್ರಜ್ಞಾನದ ನೆರವಿನಿಂದ ಇಂದಿನ ವಿದ್ಯಾರ್ಥಿಗಳು ಗೂಗಲ್ ಮತ್ತು ಇ-ಪುಸ್ತಕಗಳ ಮೂಲಕ ಜ್ಞಾನ ಪಡೆಯುತ್ತಿದ್ದಾರೆ ಎಂದರು.

ವಿಟಿಯು ರಿಜಿಸ್ಟ್ರಾರ್ ಡಾ.ಆನಂದ ಎಸ್. ದೇಶಪಾಂಡೆ ಮಾತನಾಡಿ, ರಾಷ್ಟ್ರೀಯ ಶಿಕ್ಷಣ ನೀತಿಯು ಭಾರತದ ಶ್ರೀಮಂತ ಶಿಕ್ಷಣ ಪರಂಪರೆಯ ಪ್ರತಿಬಿಂಬವಾಗಿದೆ. ದೇಶದಲ್ಲಿ ಪ್ರಸ್ತುತ 40,000 ಶಿಕ್ಷಣ ಸಂಸ್ಥೆಗಳಿದ್ದು, ಮಾನ್ಯತಾ ಸಂಸ್ಥೆಗಳು ಕಟ್ಟುನಿಟ್ಟಿನ ಮಾನದಂಡಗಳನ್ನು ಜಾರಿಗೊಳಿಸುತ್ತಿವೆ. ಹೀಗಾಗಿ 2035-40ರ ವೇಳೆಗೆ 15,000 ಅತ್ಯುತ್ತಮ ಸಂಸ್ಥೆಗಳು ಮಾತ್ರ ಉಳಿದುಕೊಳ್ಳಲಿವೆ ಎಂದರು

ಸಮಾರಂಭದಲ್ಲಿ 300 ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಬಿಐಇಟಿ ಪ್ರಿನ್ಸಿಪಾಲ್ ಡಾ.ಎಚ್.ಬಿ. ಅರವಿಂದ್ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಸಿದ್ದಪ್ಪ, ಬಿಐಇಟಿ ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ, ಡಾ. ನಾಗರಾಜ್, ಡಾ.ಮಂಜಪ್ಪ, ಡಾ. ಆರ್.ವಿ.ರಂಗನಾಥ, ಡಾ.ಜಿ.ಪಿ.ದೇಸಾಯಿ, ಡಾ.ಸಿ.ಪಿ.ಅನಿಲ್ ಕುಮಾರ್ ಇದ್ದರು.

kannada prabha
13-12-2021



# ಕಾರ್ಯಾಗಾರ ಸಮಾರೋಪ

ದಾವಣಗೆರೆ: ನಗರದ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿದ್ಯಾಲಯದ ಸಹಯೋಗದಲ್ಲಿ ನಡೆದ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಷ್ಠಾನ ಕುರಿತ ಎರಡು ದಿನಗಳ ಕಾರ್ಯಾಗಾರದ ಸಮಾರೋಪ ಸಮಾರಂಭವು ಕಾಲೇಜಿನ ಎಸ್.ಎಸ್.ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ನಡೆಯಿತು. ಪ್ರಾಚಾರ್ಯ ಡಾ. ಎಚ್.ಬಿ.ಅರವಿಂದ್ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಬೆಳಗಾವಿ ವಿಟಿಯು ರಿಜಿಸ್ಟ್ರಾರ್ (ಮೌಲ್ಯಮಾಪನ) ಡಾ.ಬಿ.ಇ.ರಂಗಸ್ವಾಮಿ, ಮಂಗಳೂರಿನ ಸಹ್ಯಾದ್ರಿ ತಾಂತ್ರಿಕ ಕಾಲೇಜಿನ ನಿರ್ದೇಶಕ ಡಾ.ಎಸ್.ಮಂಜಪ್ಪ, ಕಾಲೇಜಿನ ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ ವಿವಿಧ ವಿಭಾಗಗಳ ಮುಖ್ಯಸ್ಥರು ಇದ್ದರು.